# ಸಮಗ್ರ ಶಿಕ್ಷಣ–ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ
ಪೂರಕ ಕಟ್ಟಡಗಳು ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು–560 001


ಸಂಖ್ಯೆ: ಸಶಿಕ/ಆ.ವಿ/6ನೇ ತ.ದಾ/2022–23 ದಿನಾಂಕ: 10–01–2022

**ದಿನಾಂಕ:10–01–2022 ರಂದು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ–ಕರ್ನಾಟಕ ಇವರ ಅಧ್ಯಕ್ಷತೆಯಲ್ಲಿ 2022–23ನೇ ಸಾಲಿನ ಆದರ್ಶ ವಿದ್ಯಾಲಯಗಳ 6ನೇ ತರಗತಿದಾಖಲಾತಿಗಾಗಿ ನಡೆಸಲಾಗುವ ಪ್ರವೇಶ ಪರೀಕ್ಷೆಯ ಕುರಿತು ಪೂರ್ವಭಾವಿ ಸಭೆಯ ನಡವಳಿ.**

**ಸಭೆಯಲ್ಲಿ ಭಾಗವಹಿಸಿದ್ದವರ ವಿವರ.**

1. ಅಪರ ನಿರ್ದೇಶಕರು (ಕಾ), ಸಮಗ್ರ ಶಿಕ್ಷಣ – ಕರ್ನಾಟಕ.
2. ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಕ್ಯೂ.ಎ.ಎ.ಸಿ, ಮಲ್ಲೇಶ್ವರಂ.
3. ಜಂಟಿನಿರ್ದೇಶಕರು (ಕಾ), ಸಮಗ್ರ ಶಿಕ್ಷಣ – ಕರ್ನಾಟಕ.
4. ಹಿರಿಯ ಕಾರ್ಯಕ್ರಮಾಧಿಕಾರಿಗಳು (ಕಾ), ಸಮಗ್ರ ಶಿಕ್ಷಣ – ಕರ್ನಾಟಕ.
5. ಉಪನಿರ್ದೇಶಕರು (ಅಭಿವೃದ್ಧಿ), ಡಯಟ್, ಮಂಡ್ಯ ಜಿಲ್ಲೆ, ಮಂಡ್ಯ.
6. ಕಾರ್ಯಕ್ರಮಾಧಿಕಾರಿ, ಆದರ್ಶ ವಿದ್ಯಾಲಯ ಶಾಖೆ, ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು.
7. ಕಂಪ್ಯೂಟರ್ ಪ್ರೋಗ್ರಾಮರ್, ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು.

ಸಭೆಯ ಆರಂಭದಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಕಾರ್ಯಕ್ರಮಾಧಿಕಾರಿಗಳಾದ ಶ್ರೀ. ರಮೇಶಯ್ಯ ಕೆ.ಎಲ್ ಇವರು ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರನ್ನು ಕೋರಿದರು.

1. 2021–22ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ/ಅನುದಾನಿತ/ಅನುದಾನರಹಿತ/ಇತರೆ ವಿದ್ಯಾ ಸಂಸ್ಥೆಗಳಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು 2022–23ನೇ ಸಾಲಿಗೆ ಆದರ್ಶ ವಿದ್ಯಾಲಯದ ಪ್ರವೇಶ ಪರೀಕ್ಷೆಗೆ ಹಾಜರಾಗಲು ಅರ್ಹತೆ ಹೊಂದಿರುತ್ತಾರೆ. 6ನೇ ತರಗತಿ ಪ್ರವೇಶ ಪರೀಕ್ಷೆಯ ಪ್ರಕ್ರಿಯೆಯನ್ನು ನಡೆಸುವ ಬಗ್ಗೆ ಚರ್ಚಿಸಲಾಯಿತು.

2. ಆದರ್ಶ ವಿದ್ಯಾಲಯಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಪ್ರತಿ ವರ್ಷದಂತೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಕ್ರಮವಹಿಸುವಂತೆ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ವಿದ್ಯಾವಾಹಿನಿ ಪೋರ್ಟಲ್‌ನಲ್ಲಿ ತಂತ್ರಾಂಶದ ಬಗ್ಗೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲು ಸೂಚಿಸಲಾಯಿತು.

   **(ಕ್ರಮ: ಕಾರ್ಯಕ್ರಮಾಧಿಕಾರಿ/ಕಂಪ್ಯೂಟರ್ ಪ್ರೋಗ್ರಾಮರ್–ಶ್ರೀ.ಶ್ರೀನಿವಾಸ್ ಮುರುಗೋಡ್)**

3. ಆದರ್ಶ ವಿದ್ಯಾಲಯಗಳ 6ನೇ ತರಗತಿ ದಾಖಲಾತಿಗೆ ಪ್ರವೇಶ ಪರೀಕ್ಷೆಯನ್ನು ನಡೆಸುವ ಸಂಬಂಧ ಪ್ರಕ್ರಿಯೆಯ ಎಲ್ಲಾ ವಿವರಗಳೊಂದಿಗೆ ಸುತ್ತೋಲೆಯನ್ನು ತುರ್ತಾಗಿ ಕಛೇರಿಯಿಂದ ಸಿದ್ಧಪಡಿಸಿ http://www.schooleducation.kar.nic.in/ಯಲ್ಲಿ ಅಳವಡಿಸಿ ಪ್ರಚುರ ಪಡಿಸಲು ತಿಳಿಸಲಾಯಿತು.

   **(ಕ್ರಮ: ಕಾರ್ಯಕ್ರಮಾಧಿಕಾರಿ)**

4. ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ), ತಾಲ್ಲೂಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಶಾಲಾ ಹಂತದಲ್ಲಿ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರು ಸ್ಥಳೀಯ ಮಾಧ್ಯಮದ/ಆಕಾಶವಾಣಿ ಮೂಲಕ ವ್ಯಾಪಕವಾಗಿ ಪ್ರಚಾರ ನೀಡುವುದು ಅಗತ್ಯತೆ ಇರುತ್ತದೆ. ಈ ಬಗ್ಗೆ ಈ ಕಛೇರಿಯ ಸುತ್ತೋಲೆಯಲ್ಲಿ ಉಲ್ಲೇಖಿಸಲು ತಿಳಿಸಿದರು.

**(ಕ್ರಮ: ಸಂಬಂಧ ಪಟ್ಟ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ), ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು)**

5. ಪ್ರವೇಶ ಪರೀಕ್ಷೆಗಾಗಿ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ವಿದ್ಯಾವಾಹಿನಿ ತಂತ್ರಾಂಶ ಬಳಸಿಕೊಂಡು ದಿನಾಂಕ:24/01/2022 ರಿಂದ 09/02/2022ರವರೆಗೆ ಸಲ್ಲಿಸಲು ಅವಕಾಶ ನೀಡಲು ನಿರ್ಣಯಿಸಲಾಯಿತು.

6. ಆನ್‌ಲೈನ್ ಮೂಲಕ ಅರ್ಜಿ ಸಲಿಸುವ ಬಗ್ಗೆ ಡಯಟ್ ನೋಡಲ್ ಅಧಿಕಾರಿಗಳು, ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು ಹಾಗೂ ಜಿಲ್ಲೆಯ ಒಬ್ಬರು ಶಿಕ್ಷಣಾಧಿಕಾರಿಗಳಿಗೆ ವಿದ್ಯಾವಾಹಿನಿಯ ತಂತ್ರಾಂಶಗಳನ್ನು ಬಳಸುವ ಕುರಿತು ಹಾಗೂ ಪರೀಕ್ಷೆಯನ್ನು ನಡೆಸುವ ನಿಟ್ಟಿನಲ್ಲಿ ಮಾರ್ಗದರ್ಶನವನ್ನು ನೀಡಲು ದಿನಾಂಕ:17–01–2022ರಂದು ಬೆಳಗ್ಗೆ 10:00 ರಿಂದ 11:00 ಗಂಟೆವರೆಗೆ ಸಭೆ ನಡೆಸಲು ಸಮಯ ನಿಗದಿಪಡಿಸಲಾಯಿತು.

**(ಕ್ರಮ: ಎಸ್‌ಎಸ್‌ಕೆ)**

7. ವಿದ್ಯಾರ್ಥಿಗಳ ಆನ್‌ಲೈನ್ ಅರ್ಜಿ ಸಲ್ಲಿಕೆಯ ಸಂಖ್ಯೆಗಳನ್ನು ಆಧರಿಸಿ ಕೋವಿಡ್–19ನ್ನು ಗಮನದಲ್ಲಿಟ್ಟುಕೊಂಡು ನೂತನ ಎಸ್.ಒ.ಪಿ ಪ್ರಕಾರ ಆದರ್ಶ ವಿದ್ಯಾಲಯಗಳ ಪ್ರವೇಶ ಪರೀಕ್ಷೆಯ ಪರೀಕ್ಷಾ ಕೇಂದ್ರಗಳನ್ನು ನಿಗಧಿ ಪಡಿಸಿ ಪರೀಕ್ಷೆ ನಡೆಸುವುದೆಂದು ತೀರ್ಮಾನಕ್ಕೆ ಬರಲಾಯಿತು. ಪರೀಕ್ಷೆ ಕೇಂದ್ರಗಳ ವಿವರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆಯುವುದು.

**(ಕ್ರಮ: ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು)**

8. 2022–23ನೇ ಸಾಲಿನ ಆದರ್ಶ ವಿದ್ಯಾಲಯಗಳ 6ನೇ ತರಗತಿ ಪ್ರವೇಶ ಪರೀಕ್ಷೆಯ ದಿನಾಂಕವನ್ನು ಕೋವಿಡ್–19ರ ಪರಿಸ್ಥಿತಿಯನ್ನು ಅವಲೋಕಿಸಿಕೊಂಡು ಮುಂದಿನ ಪರೀಕ್ಷಾ ದಿನಾಂಕವನ್ನು ನಿಗದಿ ಪಡಿಸುವ ತೀರ್ಮಾನಕ್ಕೆ ಬರಲಾಯಿತು.

**(ಕ್ರಮ: ಕಾರ್ಯನಿರ್ವಾಹಕ ನಿರ್ದೇಶಕರು, ಕೆಎಸ್‌ಕ್ಯೂಎಎಸಿ, ಬೆಂಗಳೂರು)**

9. ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವುದು, ಮುದ್ರಣ, ಓ.ಎಮ್.ಆರ್ ಸಿದ್ಧಪಡಿಸುವುದು ಮತ್ತು ಮುದ್ರಣ, ಪ್ರಶ್ನೆ ಪತ್ರಿಕೆ ಸರಬರಾಜು, ಓ.ಎಮ್.ಆರ್ ಸರಬರಾಜು, ಪರೀಕ್ಷಾ ಪ್ರಕ್ರಿಯೆಗೆ ಅಗತ್ಯ ಸೂಚನೆ, ಸುತ್ತೋಲೆ ಸಿದ್ಧಪಡಿಸುವುದು ಹಾಗೂ ಪರೀಕ್ಷೆಯನ್ನು ನಡೆಸುವುದು, ಪರೀಕ್ಷೆಯ ನಂತರ ಓ.ಎಮ್.ಆರ್ ಸ್ಕ್ಯಾನಿಂಗ್, ಮೌಲ್ಯಮಾಪನದ ನಂತರ ಓ.ಎಮ್.ಆರ್‌ಗಳ ಶೇಖರಣೆ ಮತ್ತು ನಿರ್ವಹಣೆ, ಫಲಿತಾಂಶದ ಮೆರಿಟ್‌ಲಿಸ್ಟ್ ಸಿದ್ಧಪಡಿಸಿ ಎಸ್.ಎಸ್.ಕೆ ಕಛೇರಿಗೆ ಸಲ್ಲಿಸುವುದು. ಈ ಎಲ್ಲಾ ಪ್ರಕ್ರಿಯೆಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಕ್ಯೂ.ಎ.ಎ.ಸಿ ಇವರು ಪ್ರತಿ ವರ್ಷದಂತೆ ನಿರ್ವಹಿಸಿ ಯಶಸ್ವಿಗೊಳಿಸಲು ತಿಳಿಸಲಾಯಿತು.

**(ಕ್ರಮ: ಕಾರ್ಯನಿರ್ವಾಹಕ ನಿರ್ದೇಶಕರು, ಕೆಎಸ್‌ಕ್ಯೂಎಎಸಿ, ಬೆಂಗಳೂರು)**

10. ಆದರ್ಶ ಪ್ರವೇಶ ಪರೀಕ್ಷೆಗೆ ಅಂತರ್ ಜಾಲದಲ್ಲಿ ಅರ್ಜಿ ತುಂಬುವಾಗ ವಿದ್ಯಾರ್ಥಿಗಳು ಅಥವಾ ಪೋಷಕರ ಮೊಬೈಲ್ ನಂಬರ್ ಬದಲು ಸೈಬರ್ ಸೆಂಟರ್‌ನ ಮೊಬೈಲ್ ನಂಬರ್ ನಮೂದಿಸುವುದರಿಂದ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಾಹಿತಿ ತಲುಪದೇ ಇರುವುದು ಇಲಾಖಾ ಗಮನಕ್ಕೆ ಬಂದಿರುತ್ತದೆ. ಇದು ಸ್ವಲ್ಪಮಟ್ಟಿಗೆ ದುರುಪಯೋಗಕ್ಕೆ ಕಾರಣವಾಗಿದೆ ಎಂದು ಸಭೆಗೆ ಚರ್ಚಗೆ ಬಂದಿರುತ್ತದೆ. ಕಳೆದ ಬಾರಿ ದೂರು ಬಂದಿರುತ್ತದೆ. ಈ ಕಾರಣದಿಂದ 2022-23ನೇ ಸಾಲಿನಲ್ಲಿ ಯಾವುದೇ ಮೊಬೈಲ್ ಸಂಖ್ಯೆಯನ್ನು ಗರಿಷ್ಠ 02 ಅರ್ಜಿಗಳಿಗೆ ಮಾತ್ರ ಬಳಸುವ ಬಗ್ಗೆ ಸೂಚನೆ ನೀಡಲು ತೀರ್ಮಾನಿಸಲಾಯಿತು.

**(ಕ್ರಮ: ಎಸ್‌ಎಸ್‌ಕೆ)**

11. ಪ್ರಶ್ನೆ ಪತ್ರಿಕೆಯು 3, 4 ಮತ್ತು 5ನೇ ತರಗತಿಯ ಪಠ್ಯ ಕ್ರಮವನ್ನು ಹೊಂದಿರುತ್ತದೆ ಮತ್ತು ಕನ್ನಡ –16, ಇಂಗ್ಲಿಷ್–16, ಗಣಿತ–16, ವಿಜ್ಞಾನ–16, ಸಮಾಜ ವಿಜ್ಞಾನ–16, ಸಾಮಾನ್ಯ ಜ್ಞಾನ–10 ಮತ್ತು ಬೌದ್ಧಿಕ ಸಾಮರ್ಥ್ಯ–10 ಅಂಕಗಳನ್ನು ನಿಗದಿ ಪಡಿಸಿದೆ, ಇದರನ್ವಯ ಕೆ.ಎಸ್.ಕ್ಯೂ.ಎ.ಎ.ಸಿ ರವರು ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುವುದು ಹಾಗೂ ಪರೀಕ್ಷೆ ಪೂರ್ಣಗೊಂಡ 02 ದಿನಗಳೊಳಗೆ ಪ್ರಶ್ನೆ ಪತ್ರಿಕೆಗಳು ಹಾಗೂ ಕೀ ಉತ್ತರಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೆ.ಎಸ್.ಕ್ಯೂ.ಎ.ಎ.ಸಿ ಕ್ರಮ ವಹಿಸುವುದು.

**(ಕ್ರಮ: ಕಾರ್ಯನಿರ್ವಾಹಕ ನಿರ್ದೇಶಕರು, ಕೆಎಸ್‌ಕ್ಯೂಎಎಸಿ, ಬೆಂಗಳೂರು)**

12. ಪರೀಕ್ಷೆಯ ಅರ್ಜಿಗಳನ್ನು ಉಪನಿರ್ದೇಶಕರು (ಆಡಳಿತ) ಮತ್ತು ಅಭಿವೃದ್ಧಿ ಕಛೇರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕ್ಷೇತ್ರ ಸಮನ್ವಯಾಧಿಕಾರಿಗಳ ಕಛೇರಿ, ಸಿಆರ್‌ಪಿ ಕೇಂದ್ರ, ಆದರ್ಶ ವಿದ್ಯಾಲಯಗಳು ಹಾಗೂ ಶಿಕ್ಷಣ ಇಲಾಖೆಯ ಎಲ್ಲಾ ಕಛೇರಿಯಲ್ಲಿ ಉಚಿತವಾಗಿ ಅರ್ಜಿ ಸಲ್ಲಿಸಲು ಸಹಕರಿಸಲು ಕ್ರಮ ವಹಿಸುವುದು ಮತ್ತು ಇತರೆ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದೆ.

**(ಕ್ರಮ: ಸಂಬಂಧ ಪಟ್ಟ ಜಿಲ್ಲಾ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ಮತ್ತು ಪೋಷಕರು)**

13. ಹೊಸದಾಗಿ ತಾಲ್ಲೂಕು ರಚನೆಯಾಗಿರುವ ತಾಲ್ಲೂಕುಗಳಲ್ಲಿ ಹೊಸ ಶೈಕ್ಷಣಿಕ ತಾಲ್ಲೂಕು ರಚನೆಯಾಗಿಲ್ಲದ ಕಾರಣ ಹಿಂದಿನಂತೆ ಹಳೆಯ ಕಂದಾಯ ತಾಲ್ಲೂಕು ವ್ಯಾಪ್ತಿಯ ವಿದ್ಯಾರ್ಥಿಗಳನ್ನು ಆಯ್ಕೆ ಪ್ರಕ್ರಿಯೆಯಲ್ಲಿ ಪರಿಗಣಿಸುವುದು.

**(ಕ್ರಮ: ಸಂಬಂಧ ಪಟ್ಟ ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು)**

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ–ಕರ್ನಾಟಕ
ಬೆಂಗಳೂರು

**ಪ್ರತಿ.**

1. ಗೌರವಪೂರ್ವಕವಾಗಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕೊಠಡಿರವರ ಮಾಹಿತಿಗಾಗಿ ಸಲ್ಲಿಸಿದೆ.

2. ಗೌರವ ಪೂರ್ವಕವಾಗಿ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗರಸ್ತೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಅಪರ ನಿರ್ದೇಶಕರು (ಕಾರ್ಯಕ್ರಮ) ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಕಾರ್ಯನಿರ್ವಾಹಕ ನಿರ್ದೇಶಕರು, ಕೆಎಸ್‌ಕ್ಯೂಎಎಸಿ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹ ನಿರ್ದೇಶಕರು (ಕಾರ್ಯಕ್ರಮ) ಮತ್ತು ಹಿರಿಯ ಕಾರ್ಯಕ್ರಮಾಧಿಕಾರಿಗಳು (ಕಾರ್ಯಕ್ರಮ) ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಂಬಂಧಿಸಿದ ಜಿಲ್ಲೆಗಳ ಉಪ ನಿರ್ದೇಶಕರು (ಆಡಳಿತ) ಮತ್ತು ಉಪ ನಿರ್ದೇಶಕರು (ಅಭಿವೃದ್ಧಿ) ಇವರಿಗೆ ಸೂಕ್ತ ಕ್ರಮಕ್ಕಾಗಿ.
7. ಸಂಬಂಧಿಸಿದ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ, ಇವರಿಗೆ ಸೂಕ್ತ ಕ್ರಮಕ್ಕಾಗಿ.
8. ಎಲ್ಲಾ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರಿಗೆ ಅಗತ್ಯ ಮತ್ತು ಸೂಕ್ತ ಕ್ರಮಕ್ಕಾಗಿ.